ಪಟ್ಟ ಪಾಡು ರೋಮಾಂಚಕಾರಿಯಾದುದು. 'ಲಲಿತ ಮಂಟಪ'ದಲ್ಲಿ ಅಪರೂಪದ ಕಲಾವಿದರ ಪರಿಚಯ ವಿಶಿಷ್ಟವಾಗಿ ಬರುತ್ತಿದೆ. ಇದು ನೃತ್ಯ ಕಲಾವಿದರ ಕೈದೀವಿಗೆಯಂತೆ ಕೆಲಸ ಮಾಡುತ್ತಿದೆ.

**ಶಂಕರನಾರಾಯಣ ಭಟ್, ಮಾಡಗೇರಿ**
**ಪ್ರತಿಭಾ ಬಿರಾದಾರ, ಬಾಗಲಕೋಟೆ**

- ಮಯೂರ ಪ್ರತಿ ತಿಂಗಳು ಓದುವುದೇ ರಸಗವಳ ಸವಿದಂತೆ! ಅದರಲ್ಲೂ ಡಿಸೆಂಬರ್ ಸಂಚಿಕೆ ಇನ್ನೂ ಆಕರ್ಷಕವಾಗಿ ಕಂಡಿತು. ಚಂದ್ರಕಾಂತ ವಡ್ಡು ಅವರ 'ಪುಸ್ತಕ ಬಿಡುಗಡೆಯ ಗಡಿ ಬಿಡಿ!' ಖುಷಿ ಕೊಟ್ಟಿತು. ಸಾಹಿತ್ಯದ ಇನ್ನೊಂದು ರೂಪವೆಂಬಂತೆ 'ಬೀದಿ ಸಾಹಿತ್ಯ', 'ಹಾಡಂದ್ರ ಬರೀ ಹಾಡಲ್ಲ'ದಂತಹ ಬರಹಗಳು ಮೃಷ್ಟಾನ್ನದಂತೆ ರುಚಿಸಿದವು.

**ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ**

- ಎಸ್.ಗಂಗಾಧರಯ್ಯ ಅವರ 'ಧೂಳಿಡಿದ ಪಟ' ಚೆನ್ನಾಗಿದೆ. ಹಳ್ಳಿಯ ಭಾಷೆ ಓದುವ ಉತ್ಸಾಹವನ್ನು ಇಮ್ಮಡಿಗೊಳಿಸಿತು.

**ಗಂಗಾಧರ, ಬೆಟಗೇರಿ**

- 'ನೋಮ್ ಚಾಮ್‌ಸ್ಕಿ: ಅಪೂರ್ವ ವೈಚಾರಿಕ ವಿದ್ಯಮಾನ' ಚಾಮ್‌ಸ್ಕಿ ಕುರಿತು ಬಹಳಷ್ಟು ಹೇಳಿರುವ ಮೇಟಿ ಮಲ್ಲಿಕಾರ್ಜುನ ಅವರು, ಚಾಮ್‌ಸ್ಕಿ ಅವರ ವಿಚಾರಗಳನ್ನು ಸಂಕ್ಷಿಪ್ತವಾಗಿ ಬೀಜ ರೂಪದಲ್ಲಿಯಾದರೂ ಹೇಳಬೇಕಿತ್ತು. ಶಿಲ್ಪಾ ಮುಡಬಿಯವರು ಜಾತಿಯ ಬಗ್ಗೆ ಹೇಳಿರುವುದು ಸರಿಯಾಗಿದೆ. ಹಿಂದೂ ಎಲ್ಲ ಒಂದು ಎನ್ನುವುದು ಆತ್ಮವಂಚನೆ. ಯಾರ ವಿಚಾರ ಆಚರಣೆ ಏನೇ ಇರಲಿ, ಮಾನವೀಯವಾಗಿ ಬದುಕಿದರೆ ಸಾಕು.

**ರವಿ ಯಲಿಗಾರ, ಮುನವಳ್ಳಿ**

- ಲಲಿತಾ ಸಿದ್ಧಬಸವಯ್ಯ ಅವರ 'ಹೂವರಸಿ' ಕವಿತೆ ಓದಿ ಸಂತೋಷವಾಯಿತು. ಒಂದು ಔಷಧಿ ಗುಣವುಳ್ಳ ವೃಕ್ಷದ ವಿವಿಧ ಪ್ರಯೋಜನ ಹಾಗೂ ಅರಿಸಿನ ಬಣ್ಣದ ಹೂ ಪೂಜೆಗೆ ಏಕೆ ಅರ್ಹವಲ್ಲ ಎಂಬ ಧರ್ಮ ಜಿಜ್ಞಾಸೆ ಹೊಂದಿರುವ ಕವಿತೆಯ ಉದ್ದೇಶ ನವನವೀನತೆಯಿಂದ ಕೂಡಿದೆ. ನಾವು ಚಿಕ್ಕವರಿದ್ದಾಗ ಹಳ್ಳಿಮಕ್ಕಳಾದ ನಮಗೆ ಹುವರ್ಚಿ, ಗೋಣಿ ಮರಗಳ ಕಾಯಿ, ಮರದ ತೊಗಟೆ, ಚಕ್ಕೆ, ಅದರ ರಸ, ಎಲೆ, ಮೊಗ್ಗು ಹಾಗೂ ಬೇರುಗಳನ್ನು ಕಜ್ಜಿ, ತುರಿಕೆ, ನವೆ, ಹುಳುಕಡ್ಡಿ ಮುಂತಾದ ಚರ್ಮ ಸಂಬಂಧಿ ಸಮಸ್ಯೆಗೆ ರಾಮಬಾಣವಾಗಿ ನಮ್ಮ ಹಿರಿಯರು ಬಳಕೆ ಮಾಡುತ್ತಿದ್ದರು. ಔಷಧಿ ಗುಣವುಳ್ಳ 'ಗೋಣಿ ಮರ'ದ ಮೊಗ್ಗು (ಚಿಗುರು) ಬಹು ಉಪಯೋಗಿ. ಇದರ ಗುಣವನ್ನು ಗುರುತಿಸಿ ಅದಕ್ಕೆ ಕಾವ್ಯದ ಫ್ರೇಮ್ ಕಟ್ಟಿದ್ದಾರೆ. ಬಹಳ ಸೊಗಸಾಗಿ ನಿರೂಪಿತವಾಗಿದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಲಲಿತಾ ಸಿದ್ಧಬಸವಯ್ಯ ಅವರ 'ಹೂವರಸಿ' ಹೂವಿನ ಬಣ್ಣನೆಯೊಂದಿಗೆ ಹೆಣ್ಣಿನ ಸ್ಥಾನಮಾನ ಧ್ವನಿಸುವ ಕವಿತೆ ಸುಂದರತೆಯನ್ನು ಧ್ಯಾನಿಸುತ್ತದೆ. ಕೆ. ಸಚ್ಚಿದಾನಂದನ್ ಅವರ 'ಗಾಂಧೀಜಿ ಮತ್ತು ಕಾವ್ಯ' ಗದ್ಯಗಂಧಿ ಅನುವಾದದ ಆಚೆಗೂ ತನ್ನ ಸ್ವಾರಸ್ಯ ಬೀರಿರುವ ಚೆಲುವಾದ ಕವಿತೆ. ವೀರಣ್ಣ ಮಡಿವಾಳರ 'ಉರಿಗೊಳ್ಳಿಯ ಬಳ್ಳಿ' ಮತ್ತೊಂದು ಗಮನಾರ್ಹ ಕವಿತೆ. ಈ ಕಾವ್ಯ ಗುಚ್ಛ ಈ ತಿಂಗಳ ಮಯೂರ ಸಂಚಿಕೆಯ ಚೆಲುವನ್ನು ಹೆಚ್ಚಿಸಿದೆ.

**ಶ್ರೀಧರ, ಬೆಂಗಳೂರು**

- ನನ್ನ ಓದು ನನ್ನಿಷ್ಟದ ಅಂಕಣ. ಪ್ರತಿಸಲ ಇದಕ್ಕಾಗಿಯೇ ಕಾಯುತ್ತೇನೆ. ದಿನಕ್ಕೆ ಹತ್ತಾರು ಪುಸ್ತಕಗಳು ಪ್ರಕಟಗೊಳ್ಳುತ್ತವೆಯಾದರೂ ಓದಲು ಒಂದೊಳ್ಳೆ ಪುಸ್ತಕದ ಹುಡುಕಾಟಕ್ಕೆ ನಿಂತರೆ ಆಯ್ಕೆ ಕಠಿಣವೇ. ಯಾವುದನ್ನು ಓದಬೇಕು, ಯಾವುದು ಬೇಡ ಎನ್ನುವ ಗೊಂದಲದಲ್ಲಿರುವವರಿಗೆ 'ನನ್ನ ಓದು' ಸಹಾಯಕಾರಿ.

**ಆನಂದಕುಮಾರ್ ಕೆ.ಎಂ., ಬೆಂಗಳೂರು**

- ಹೇಮಲತೆ ಪ್ರಭಾಕರ ಅವರ ಕಾದಂಬರಿಯ ಕುರಿತ ಬರಹ ಸಮಗ್ರವಾಗಿತ್ತು.

**ದೀಪಾ ನಂದಕುಮಾರ್, ದಾವಣಗೆರೆ**